**ದಿನಾಂಕಃ 02-09-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ನಂ.3, 4, 8 ಮತ್ತು 9 ರವರ ಪರ ಶ್ರೀ. ಎಸ್ ಜಿ ಕೆ ವಕೀಲರಿಂದಃ**

ನಾನು 3 ವರ್ಷ ವಯಸ್ಸಲ್ಲಿದ್ದಾಗ ನಮ್ಮ ತಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ಸಮಯದಲ್ಲಿ 2 ನೇ ಪ್ರತಿವಾದಿ 6 ತಿಂಗಳು ವಯಸ್ಸಿನವನಿದ್ದ. ಪ್ರತಿವಾದಿ ನಂ.1(ಎ) ನಮ್ಮ ತಂಗಿ ಇರುತ್ತಾರೆ, ಅವರು ನಮ್ಮ ತಂದೆ ತೀರಿಕೊಂಡಾಗ ಅವರಿಗೆ ಒಂದೂವರೆ ವರ್ಷ ವಯಸ್ಸು ಇತ್ತು. ನಾನು 1969 ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ಪ್ರತಿವಾದಿ ನಂ.1(ಎ) ರವರ ಮದುವೆ 1967 ನೇ ಇಸವಿಯಲ್ಲಿ ಆಗಿದೆ. ನಾವು ಭಾವಸಾರ ಕ್ಷತ್ರೀಯ ಜಾತಿಯವರಿರುತ್ತೇವೆ. ನಮ್ಮ ಜಾತಿಯಲ್ಲಿ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಇಬ್ಬರೂ ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಬಟ್ಟೆ ಹೊಲಿಯುವುದು ಮತ್ತು ಬಟ್ಟೆ ಮಾರಾಟ ನಮ್ಮ ಜನಾಂಗದ ಮುಖ್ಯ ಕಸುಬು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅದು ಸಹ ನಮ್ಮ ಜನಾಂಗದ ಒಂದು ಕಸುಬು ಇದ್ದು, ಅದನ್ನು ಗಂಡು ಮಕ್ಕಳು ಮಾತ್ರ ಮಾಡುತ್ತಾರೆ ಎಂದು ಹೇಳುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ನನ್ನ, ನಮ್ಮ ತಮ್ಮ ಮತ್ತು ತಂಗಿಯ ವಿದ್ಯಾಭ್ಯಾಸ ಮತ್ತು ಮದುವೆ ಖರ್ಚುಗಳನ್ನು ನಮ್ಮ ತಾಯಿ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನನ್ನನ್ನು, ನಮ್ಮ ತಮ್ಮ ಮತ್ತು ತಂಗಿಯನ್ನು ನಮ್ಮ ತಾಯಿ ಸಾಕಿ ಸಲುಹಿದ್ದಾರೆ ಆದರೆ, ನನ್ನ ಸ್ವಂತ ದುಡಿಮೆಯಿಂದ ನಾನು ವಿದ್ಯಾಭ್ಯಾಸ ಮಾಡಿ, ನಮ್ಮ ತಮ್ಮನಿಗೂ ಸಹ ವಿದ್ಯಾಭ್ಯಾಸಕ್ಕೆ ನಾನೇ ಸಹಾಯ ಮಾಡಿದ್ದೇನೆ, ಆದರೆ ನಮ್ಮ ತಂಗಿಯ ವಿದ್ಯಾಭ್ಯಾಸವನ್ನು ನಮ್ಮ ತಾಯಿ ಮಧ್ಯದಲ್ಲಿಯೇ ಬಿಡಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು 1969 ನೆ ಇಸವಿಯಲ್ಲಿ

ಬ್ಯಾಂಕ್ ನಲ್ಲಿ ಕೆಲಸ ಮಾಡಲು ಪ್ರಾರಂಭ ಮಾಡಿದ್ದೇನೆ ಎಂದರೆ ಸರಿ. ನನ್ನ ಸ್ವಂತ ದುಡಿಮೆಯಿಂದ ನನ್ನ ಹಾಗೂ ನಮ್ಮ ತಮ್ಮನ ವಿದ್ಯಾಭ್ಯಾಸವನ್ನು ನೋಡಿಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಪ್ರತಿವಾದಿ ನಂ.1 ಬಟ್ಟೆ ಹೊಲಿಯುವುದು ಮತ್ತು ಬಟ್ಟೆ ಮಾರಾಟದ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನಿಮ್ಮ ತಾಯಿ ಸಾಯುವವರೆಗೆ 2 ನೇ ಪ್ರತಿವಾದಿಯೊಂದಿಗೆ ವಾಸ ವಾಗಿದ್ದರು ಎನ್ನುವ ಪ್ರಶ್ನೆಗೆ, ಸಾಕ್ಷಿಯು ನಾನು ಬ್ಯಾಂಕ್ ನಲ್ಲಿ ಕೆಲಸ ಮಾಡುತಿದ್ದೆ, 1978 ನೇ ಇಸವಿಯವರೆಗೆ ನಾನು ನಮ್ಮ ತಾಯಿಯ ಜೊತೆಗೆ ಇದ್ದೆ, ನಂತರ ನನಗೆ ಪದೋನ್ನತಿ ಹೊಂದಿ ಪ್ರತಿ 3 ವರ್ಷಗಳಿಗೊಮ್ಮೆ ನನಗೆ ವರ್ಗಾವಣೆ ಆಗುತ್ತಿತ್ತು, ಆ ಸಮಯದಲ್ಲಿ 2 ನೇ ಪ್ರತಿವಾದಿ ರಾಯಚೂರು ನಲ್ಲಿ ವಾಸವಾಗಿದ್ದು, ವ್ಯಾಪಾರ ಮಾಡುತ್ತಿದ್ದರು, ಆದ್ದರಿಂದ ನಮ್ಮ ತಾಯಿ ನಮ್ಮ ತಮ್ಮನ ಜೊತೆ ವಾಸವಾಗಿದ್ದರು ಎಂದು ಹೇಳುತ್ತಾರೆ. ಸಾಕ್ಷಿಯು ನಿಡಿ-1 ನ್ನು ನೋಡಿ ಆ ಪ್ರಕಾರ ನಮ್ಮ ತಾಯಿ ಪರವಾಗಿ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ ಪಿ ಪ್ರಕರಣ ದಾಖಲಿಸಿದ್ದೆ ಎಂದು ಹೇಳುತ್ತಾರೆ. ನಿಡಿ-1 ರಂತೆ ಪ್ರಕರಣ ದಾಖಲಿಸಲು ವಕೀಲರಿಗೆ ನಮ್ಮ ತಾಯಿ ಪರವಾಗಿ ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ನಿಡಿ-1 ರಲ್ಲಿ ನಮ್ಮ ತಾಯಿಯ ಉದ್ಯೋಗ ಬಿಸಿನೆಸ್ ಎಂದು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದರಲ್ಲಿ ತಪ್ಪಾಗಿ ಬರೆಯಲಾಗಿದೆ ಎಂದು ಹೇಳುತ್ತಾರೆ. ನಿಡಿ-1 ರಲ್ಲಿ ನಮ್ಮ ತಾಯಿ ಉದ್ಯೋಗ ಬಿಸಿನೆಸ್ ಎಂದು ತಪ್ಪಾಗಿ ಬರೆಯಲಾಗಿದೆ ಎಂದು ನಾನು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಬ್ಯಾಂಕ್ ನಲ್ಲಿ ಕೆಲಸ ಸಿಕ್ಕ ನಂತರ ನಾನು 1982 ರಿಂದ 1986 ನೇ ಇಸವಿಯಲ್ಲಿ ನಾನು ರಾಯಚೂರು ಮತ್ತು ಗುಂಜಳ್ಳಿ ಯಲ್ಲಿ ಕೆಲಸ ಮಾಡುತಿದ್ದೆ ಮತ್ತು ಪ್ರತಿದಿನ ನಾನು ರಾಯಚೂರು ದಿಂದ ಗುಂಜಳ್ಳಿಗೆ ಗೆ ಕೆಲಸಕ್ಕೆ ಹೋಗಿ ಬಂದು ಮಾಡುತ್ತಿದ್ದೆ. 1986 ನೇ ಇಸವಿಯಿಂದ ನಾನು ರಾಯಚೂರು ನಲ್ಲಿ ವಾಸವಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ 1986 ನೇ ಇಸವಿಯಿಂದ ರಾಯಚೂರು ದಿಂದ ಬೇರೆ ಕಡೆಗೆ ವರ್ಗಾವಣೆ ಆಗಿದ್ದರಿಂದ ವಾಸವಾಗಿರಲಿಲ್ಲ ಎಂದು ಹೇಳುತ್ತಾರೆ. ನನಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. 1994 ನೇ ಇಸವಿಯಲ್ಲಿ ನನಗೆ ರೂ.28,000 ರಿಂದ 30,000/- ಪ್ರತಿ ತಿಂಗಳು ಸಂಬಳ ಇತ್ತು. 1994 ನೇ ಇಸವಿಯಲ್ಲಿ ನಾನು ಬೆಂಗಳೂರು ನಲ್ಲಿ ಕೆಲಸ ಮಾಡುತಿದ್ದೆ, ಆಗ ನನ್ನ ಎಲ್ಲ ಹೆಣ್ಣು ಮಕ್ಕಳು ಬೆಂಗಳೂರು ನಲ್ಲೇ ವಿದ್ಯಾಬ್ಯಾಸ ಮಾಡುತ್ತಿದ್ದರು. ನಾನು ಬೆಂಗಳೂರು ನಲ್ಲಿ ನಮ್ಮ ಬ್ಯಾಂಕ್ ನ ಕ್ವಾರ್ಟರ್ಸ್ ನಲ್ಲಿ ಉಚಿತವಾಗಿ ವಾಸ ಮಾಡುತಿದ್ದೆ. 1994 ನೇ ಇಸವಿಯಲ್ಲಿ ನನ್ನ ದೊಡ್ಡ ಮಗಳು ಬಿ.ಕಾಂ, 2 ನೇ ಮಗಳು ಪಿ ಯು ಸಿ, 3 ನೇ ಮಗಳು 9 ನೇ ತರಗತಿ ಮತ್ತು 4 ನೇ ಮಗಳು 7 ನೇ ತರಗತಿಯಲ್ಲಿ ವಿದ್ಯಾಬ್ಯಾಸ ಮಾಡುತಿದ್ದರು. 1994 ನೇ ಇಸವಿ ನಂತರ ನನ್ನ ಮಕ್ಕಳು ದೊಡ್ಡವರು ಆದ ಹಾಗೇ ಅವರ ವಿದ್ಯಾಬ್ಯಾಸ ಮತ್ತು ನನ್ನ ಮನೆಯ ಖರ್ಚು ಹೆಚ್ಚಾಗುತ್ತ ಹೋಗಿದೆ ಎಂದರೆ ಸರಿಯಲ್ಲ. 1994 ನೆ ಇಸವಿಯಲ್ಲಿ ನಾನು ಆದಾಯ ತೆರಿಗೆ ಪಾವತಿದಾರರನಿದ್ದೆ. ನಮ್ಮ ತಾಯಿ ಹೆಸರಿನಲ್ಲಿ ಆಸ್ತಿ ಖರೀದಿ ಮಾಡುವಾಗ ನಾನು ರೂ.15,000/- ಹಣ ಅವರಿಗೆ ಕೊಟ್ಟಿದ್ದೇನೆ ಎನ್ನುವ ಬಗ್ಗೆ ನನ್ನ ಆದಾಯ ತೆರಿಗೆ ದಾಖಲೆಯಲ್ಲಿ ನಾನು ತೋರಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಅದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. 2 ನೇ ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಿಸಲು ನಾನು ನಮ್ಮ ತಾಯಿಗೆ ಆರ್ಥಿಕ ಸಹಾಯ ಮಾಡಿದ್ದೇನೆ ಎನ್ನುವ ಬಗ್ಗೆ ನನ್ನ

ಆದಾಯ ತೆರಿಗೆ ದಾಖಲೆಯಲ್ಲಿ ತೋರಿಸಿಲ್ಲ ಮತ್ತು ಅದರ ಬಗ್ಗೆ ಯಾವುದೇ ಲೆಕ್ಕ ಪತ್ರ ಇಟ್ಟಿರುವುದಿಲ್ಲ. 2 ನೇ ದಾವಾ ನಮ್ಮ ತಾಯಿ ಖರೀದಿ ಮಾಡುವಾಗ ಮತ್ತು ಅದರಲ್ಲಿ ಕಟ್ಟಡ ಕಟ್ಟಿಸುವಾಗ ಹಣವನ್ನು ನಮ್ಮ ತಾಯಿಗೆ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆ ರೀತಿ ನಾನು ರೂ.15,000/- ಬ್ಯಾಂಕ್ ನಲ್ಲಿ ತೆಗೆಸಿಕೊಂಡು ಬಂದಿದ್ದೇನೋ ಅಥವಾ ಯಾವ ರೀತಿ ಹಣ ನನಗೆ ಬಂದಿತ್ತು ಎನ್ನುವ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ. ನಾನು ಆ ರೀತಿ ನಮ್ಮ ತಾಯಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ, ಆ ಕಾರಣಕ್ಕೆ ಅದರ ಬಗ್ಗೆ ಆದಾಯ ತೆರಿಗೆ ದಾಖಲೆಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಬಟ್ಟೆ ಹೊಲಿಯುವುದು ಮತ್ತು ಬಟ್ಟೆ ಮಾರಾಟದಿಂದ ಬಂದ ಆದಾಯದಿಂದ 2 ನೇ ದಾವಾ ಆಸ್ತಿಯನ್ನು ಖರೀದಿ ಮಾಡಿ, ಅದರಲ್ಲಿ ಕಟ್ಟಡ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ಬರುತ್ತಿದ್ದ ಸಂಬಳ ನಾನು ಬೆಂಗಳೂರು ನಲ್ಲಿದ್ದಾಗ ನನ್ನ ಕುಟುಂಬವನ್ನು ನಿರ್ವಹಣೆ ಮಾಡಲು ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ದೊಡ್ಡ ಮಗಳು ದುಡಿಯುತಿದ್ದಳು ಮತ್ತು 2 ನೇ ಮಗಳು ಸಿ ಎ ಮಾಡಿ, ಅವರು ಸಹ ದುಡಿದು ನನಗೆ ಸಹಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆ ರೀತಿ ನನ್ನ ಮಕ್ಕುಳ ದುಡಿದು ನನಗೆ ಸಹಾಯ ಮಾಡುತ್ತಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ 1 ತಿಂಗಳು ವಯಸ್ಸಿನವರಿದ್ದಾಗ ನಮ್ಮ ತಮ್ಮನ ಹೆಂಡತಿ ಅವರನ್ನು ಬಿಟ್ಟು ತವರು ಮನಗೆ ಹೋಗಿದ್ದರು ಎಂದರೆ ಸರಿ ಸಾಕ್ಷಿ ಮುಂದುವರೆದು ಅವರು ಮತ್ತೇ ಬಂದಿಲ್ಲ, ನಂತರ ನಮ್ಮ ತಮ್ಮ ಮತ್ತು ಆತನ ಹೆಂಡತಿ ನಡುವೆ ವಿಚ್ಛೇದನೆ ಹೈದಾರಾಬಾದ್ ನ್ಯಾಯಾಲಯದಲ್ಲಿ ಆಗಿದೆ ಎಂದು ಹೇಳುತ್ತಾರೆ. ನನ್ನ ತಮ್ಮನ ವಿಚ್ಛೇದನೆ ಆದ ಬಗ್ಗೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ.

ವಿಚ್ಛೇದನದ ದಾಖಲೆಯನ್ನು ನಾನು ವೈಯ್ಯಕ್ತಿಕವಾಗಿ ನೋಡಿರುವುದಿಲ್ಲ, ಸಾಕ್ಷಿ ಮುಂದುವರೆದು ಸದರಿ ವಿಷಯವನ್ನು ನನಗೆ ನಮ್ಮ ತಮ್ಮ ಮತ್ತು ನಮ್ಮ ತಾಯಿ ಇಬ್ಬರು ನನಗೆ ತಿಳಿಸಿದ್ದಾರೆ ಎಂದು ಹೇಳುತ್ತಾರೆ. ನಮ್ಮ ತಮ್ಮ ಮತ್ತು ತಮ್ಮನ ಹೆಂಡತಿ ವಿಚ್ಛೆದನೇ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ತಮ್ಮನನ್ನು ಆತನ ಹೆಂಡತಿ ಸುಮ್ಮನೆ ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3, 4 ಮತ್ತು 8 ರವರು ಪ್ರತಿವಾದಿ ನಂ.1 ಮತ್ತು 2 ರವರ ಜೊತೆಗೆ ಇದ್ದು, ಜೋಪಾನ ಆಗಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿ ರವರ ಮದುವೆ ಆಗಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರ ಮತ್ತು ನಮ್ಮ ನಡುವೆ ಸಂಪರ್ಕ ಇಲ್ಲ ಆದ್ದರಿಂದ ಅದರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. 8 ನೇ ಪ್ರತಿವಾದಿ ಸಹ ಅವಿವಾಹಿತ ಇದ್ದು, ಆತನ ಮಾನಸಿಕ ಸ್ಥಿತಿ ಸರಿಯಿರುವುದಿಲ್ಲ ಎಂದರೆ ಸರಿ. ನಮ್ಮ ತಾಯಿಯನ್ನು ಪ್ರತಿವಾದಿ ನಂ.3, 4 ಮತ್ತು 8 ರವರು ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.3, 4 ಮತ್ತು 8 ರವರು ಬೆಂಗಳೂರು ನಲ್ಲಿ ಸಾಪ್ಟ್ ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ತಾಯಿಯನ್ನು ಪ್ರತಿವಾದಿ ನಂ.3, 4 ಮತ್ತು 8 ರವರು ನೋಡಿಕೊಂಡಿದ್ದರು ಸಹ ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯನ್ನು ಹೊರತುಪಡಿಸಿ ನಮ್ಮ ತಾಯಿಗೆ ರಾಯಚೂರು ನಲ್ಲಿ ಇನ್ನೊಂದು ಆಸ್ತಿ ಇತ್ತು. ಸದರಿ ಇನ್ನೊಂದು ಆಸ್ತಿ ರಾಯಚೂರು ನ ಬೆರೂನ್ ಕಿಲ್ಲಾ ಪ್ರದೇಶದಲ್ಲಿ ಇತ್ತು. ಸದರಿ ಆಸ್ತಿ ನಮ್ಮ ತಾಯಿ ಹೆಸರಿನಲ್ಲಿತ್ತು, ಅದನ್ನು ನಮ್ಮ ತಾಯಿಯೇ 1996 ನೇ ಇಸವಿಯಲ್ಲಿ ಮಾರಾಟ ಮಾಡಿದ್ದಾರೆ. 2 ನೇ ದಾವಾ ಆಸ್ತಿ ಮತ್ತು ಬೆರೂನ್ ಕಿಲ್ಲಾದಲ್ಲಿದ್ದ ಆಸ್ತಿ ಎರಡೂ ನಮ್ಮ ತಾಯಿಯ ಸ್ವಂತ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಯಲ್ಲಿ ನನಗೆ, ನಮ್ಮ ತಮ್ಮ ಮತ್ತು

ತಂಗಿಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನಮ್ಮ ಜಂಟಿ ಕುಟುಬದ ಆಸ್ತಿ ಮತ್ತು ಅದನ್ನು ಖರೀದಿಸಲು ಮತ್ತು ಕಟ್ಟಡ ಕಟ್ಟಿಸಲು ನಾವು ಆರ್ಥಿಕ ಸಹಾಯ ಮಾಡಿದ್ದೇವೆ ಎಂದು ಹೇಳುತ್ತಾರೆ.

2 ನೇ ದಾವಾ ಆಸ್ತಿ ನಂ.11-5-23/79 (ಹೊಸ) ನ್ನು ಪ್ರತಿವಾದಿ ನಂ.3 ಮತ್ತು 4 ರವರಿಗೆ ದಾನ ಪತ್ರದ ಮೂಲಕ ನಮ್ಮ ತಾಯಿ ಬರೆದುಕೊಟ್ಟಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಆ ರೀತಿ ದಾನ ಪತ್ರ ಬರೆದುಕೊಡಲು ಅಧಿಕಾರ ಇರಲಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ನಮ್ಮ ತಾಯಿ 8 ನೇ ಪ್ರತಿವಾದಿ ಗೆ ಆಸ್ತಿ ನಂ.11-5-23/80 (ಹೊಸ) ಆಸ್ತಿಯನ್ನು ಮೃತ್ಯು ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ಬರೆದುಕೊಡಲು ಅಧಿಕಾರ ಇರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಿಃ 19.10.2013 ರಂದು ನೊಂದಣಿಯಾದ ಮೂಲ ಮೃತ್ಯು ಪತ್ರದ ದಾಖಲೆಯನ್ನು ತೋರಿಸಿದ್ದು, ಅದನ್ನು **ನಿಡಿ-2 ಎಂದು** ಗುರುತಿಸಲಾಯಿತು. ನನ್ನ ದೊಡ್ಡ ಮಗಳ ಹೆಸರು ಗೀತ ಎಂದರೆ ಸರಿ. ಅವರ ಮದುವೆ ದಿಃ 01.02.1995 ರಂದು ಆಗಿರುತ್ತದೆ. ನನ್ನ ದೊಡ್ಡ ಮಗಳ ಮದುವೆ ದಿಃ 01.02.1994 ರಂದು ಆಗಿದೆ ಎಂದರೆ ಸರಿಯಲ್ಲ. ನನ್ನ ದೊಡ್ಡ ಮಗಳ ಮದುವೆಯನ್ನು ನಾನು ಅದ್ದೂರಿಯಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಮದುವೆಯನ್ನು ಯಾವುದೇ ವರದಕ್ಷಿಣೆ ನೀಡದೇ ಬಹಳ ಸರಳ ರೀತಿಯಲ್ಲಿ ಮಾಡಿದ್ದೇನೆ ಮತ್ತು ಬೆಂಗಳೂರು ನಲ್ಲಿ ಯಾರು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. 1994 ನೇ ಇಸವಿಯಲ್ಲಿ ನನ್ನ ದೊಡ್ಡ ಮಗಳ ಮದುವೆ ಮಾಡಿ, ನಾನು ಸಾಲದಲ್ಲಿ ಇದ್ದೆ ಎಂದರೆ ಸರಿಯಲ್ಲ. ಆದ ಕಾರಣ ಆ

ಸಮಯದಲ್ಲಿ 2 ನೇ ದಾವಾ ಆಸ್ತಿ ಖರೀದಿ ಮಾಡಲು ನಮ್ಮ ತಾಯಿಗೆ ಹಣ ಕೊಡಲು ಮತತು ನಂತರ ಕಟ್ಟಡ ಕಟ್ಟಿಸಲು ನನಗೆ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡ ಮಗಳ ಮದುವೆಯನ್ನು ಯಾವುದೇ ವರದಕ್ಷಿಣೆ ನೀಡದೆ ಬಹಳ ಸರಳ ರೀತಿಯಲ್ಲಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1994 ನೇ ಇಸವಿಯಲ್ಲಿ ರೂ.28,000/- ಸಂಬಳ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನನಗೆ ಸಂಬಳ ಇತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಮ್ಮ ಹೆಂಡತಿ ಮತ್ತು ಅವರಿಬ್ಬರ ಮಕ್ಕಳಾದ ಚೆನ್ನ ರಾಣಿ ಮತ್ತು ಹೇಮಲತ ರವರನ್ನು ಪಕ್ಷಗಾರರಾಗಿ ಮಾಡಿಲ್ಲ ಎನ್ನುವ ಪ್ರಶ್ನೇಗೆ, ಸಾಕ್ಷಿಯು ನಮ್ಮ ತಮ್ಮನ ವಿವಾಹ ವಿಚ್ಛೇದನೆ ಆಗಿದೆ ಹಾಗೂ ಚೆನ್ನರಾಣಿ ಮತ್ತ ಹೇಮಲತ ಇಬ್ಬರೂ ತೀರಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**